B.L.D.E. Association's

# S. B. Arts & K.C.P. Science College, VIJAYAPUR- 586 103.

# ASSIGNMENT

For B.A./ ~~B.Sc.~~ III Semester

2022 - 2023

Name of the Student Bhavramma. D. Gugihal

Roll No. 47 R.C.U. Seat No. U15KM21A0147

Subject DSC-6 Edu

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

[illegible]
[illegible]

[illegible]

# ಪರಿವಿಡಿ


| ಕ್ರಮ ಸಂ. | ವಿಷಯ | ಪು. ಸಂ. |
|---|---|---|
| 1 | ಪೀಠಿಕೆ | 1 |
| 2 | ಜಾತೀಯತೆ.<br>ಜಾತ್ಯತೀತತೆ. | 2. |
| 3 | ಧರ್ಮಾಂಧತೆ.<br>ಧಾರ್ಮಿಕ ಗಲಭೆಗಳು | 3 |
| 4 | ಉಪಸಂಹಾರ | 4 |
| 5 | ಉದ್ಧರಣಗಳು. | 5 |
| 6. | ಚಿತ್ರಗಳು | 6. |

## ರಾಷ್ಟ್ರೀಯ ಜೀವನದಲ್ಲಿ ಛಿದ್ರಕಾರಕ ಮನೋಭಾವನೆಗಳು or ಮನಸ್ಥಿತಿಗಳು.

**ಪೀಠಿಕೆ**

ರಾಷ್ಟ್ರೀಯ ಸಮಗ್ರತೆಯು ಒಂದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ದೇಶದ ಜನರ ಭಾವನೆಗಳು ಅನೇಕ ಕಾರಣಗಳಿಂದ ಛಿದ್ರ ಛಿದ್ರವಾಗುತ್ತಿವೆ. ಸ್ವಾತಂತ್ರ್ಯ ಹೋರಾಟದಲ್ಲಿದ್ದ ಒಗ್ಗಟ್ಟು ಇವತ್ತಿಲ್ಲದಂತೆ ಮಾಯವಾಗಿದೆ.

**ಅಂಶಗಳು**

ಕೋಮುವಾದ –

ಭಾರತವು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಎಂದರೆ ಕೋಮುವಾದ, ಕೋಮುವಾದವು ನಮ್ಮ ಜಾತ್ಯಾತೀತ ತತ್ವಗಳಿಗೆ ಅಪಾಯವಾಗಿದೆ. ಕೋಮುವಾದವೆಂದರೆ ಅನ್ಯ ಧರ್ಮದ ಜನರ ಬಗ್ಗೆ ದ್ವೇಷ ಇಟ್ಟುಕೊಳ್ಳುವುದು.

* 14 ನೇ ವಿಧಿ ಕಾನೂನಿನ ಎದುರು ಸಕಲರಿಗೂ ಸಮಾನತೆಯನ್ನು ನೀಡಿದೆ.

* 15 ನೇ ವಿಧಿಯಂತೆ ರಾಜ್ಯವು ಜಾತಿ, ಧರ್ಮ, ಜನಾಂಗ or ಲಿಂಗಭೇದ ಭಾವನೆಗಳನ್ನು ತೋರಿಸದೆ ಎಲ್ಲಾ ಸಮಾನರು ಎಂದು ಸಾರಿದೆ.

* 16 ನೇ ವಿಧಿ ಅವಕಾಶಗಳನ್ನು ಸಕಲ ಪ್ರಜೆಗಳಿಗೂ ಸಮನಾಗಿ ನೀಡಿದೆ.

## ಜಾತೀಯತೆ —

ಭಾರತವು ಒಂದು ಜಾತ್ಯಾತೀತ ರಾಷ್ಟ್ರ. ಇಲ್ಲಿ ಎಲ್ಲ ಧರ್ಮಗಳು ಸಮಾನ. ಈ ಧರ್ಮಗಳಲ್ಲಿಯೇ ಹಲವಾರು ಜಾತಿಗಳಿವೆ. ಜಾತಿಗಳಲ್ಲಿ ಉಪಜಾತಿ-ಗಳಿವೆ. ಈ ಜಾತಿ-ಉಪ ಜಾತಿಗಳಲ್ಲಿ ಒಗ್ಗಟ್ಟು ಇಲ್ಲದಿರುವುದು, ಸ್ನೇಹ ಇಲ್ಲದಿರುವುದು ಹಾಗೂ ಮೇಲು-ಕೀಳು ಎಂಬ ಭಾವನೆಗಳು ಜಾತೀಯತೆ-ಯನ್ನು ಸೃಷ್ಟಿಸಿ ರಾಷ್ಟ್ರದ ಪ್ರಗತಿಗೆ ಅಡ್ಡಿಯಾಗಿದೆ.

ವ್ಯಕ್ತಿಯೊಬ್ಬನು ಒಂದು ನಿರ್ದಿಷ್ಟ ಜಾತಿಗೆ ಸೇರಿದ ಮಾತ್ರಕ್ಕೆ, ಅವನು ಎಲ್ಲರ ಗೌರವ-ಕ್ಕೆ ಮತ್ತು ಇತರ ಸೌಲಭ್ಯಗಳಿಗೆ ಪಾತ್ರನೆಂದು ಪರಿಗಣಿಸುವುದು ಮೂಢತನವಾಗಿದೆ.

## ಪ್ರಾದೇಶಿಕತೆ / ಪ್ರಾಂತೀಯತೆ —

ಭಾರತ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹಾಗೂ ರಾಷ್ಟ್ರದ ಐಕ್ಯತೆಗೆ ಅಡ್ಡಿಯಾಗಿರುವ ಅಂಶಗಳಲ್ಲಿ ಪ್ರಾಂತೀಯತೆ ಪ್ರಮುಖವಾದುದಾಗಿದೆ. "ಪ್ರಾಂತೀಯತೆ ಎಂದರೆ - ತನ್ನ ಪ್ರದೇಶ or ಪ್ರಾಂತ್ಯ-ದ ಬಗ್ಗೆ ಹೊಂದಿರುವ ಅತಿಯಾದ ವ್ಯಾಮೋಹ, ಪ್ರಾದೇಶಿಕ-ದ ರಕ್ಷಣೆ ಮತ್ತು ಸಂಕುಚಿತ ಭಾವನೆಗಳನ್ನು ಹೊಂದಿ ತಮ್ಮ ಪ್ರದೇಶವೇ ಶ್ರೇಷ್ಠ ಎಂಬ ಭಾವನೆ ತಾಳುವುದು".

* ತೆಲಂಗಾಣ ಸಮಸ್ಯೆ, ಗೂರ್ಖಾಲ್ಯಾಂಡ್ ಬೇಡಿಕೆ.

* ಮಹಾರಾಷ್ಟ್ರ - ಕರ್ನಾಟಕ / ಕರ್ನಾಟಕ - ಕೇರಳ or ಕರ್ನಾಟಕ - ಆಂಧ್ರ ಗಡಿ ವಿವಾದ.

* ಪ್ರಾದೇಶಿಕ ಪಕ್ಷಗಳು — D.M.K, A.I.D.M.K. T.D.P, J.D.S. ಪ್ರಮುಖವಾದವು ಇತ್ಯಾದಿ.

ಭಾಷಾಂಧತೆ –

ಒಂದೇ ಭಾಷೆಯನ್ನು ಆಡುವ ಜನರುಗಳು ಭಾರತದಲ್ಲಿ ಪ್ರತ್ಯೇಕ ರಾಜ್ಯ ಸ್ಥಾಪನೆಗೋಸ್ಕರ ಹೋರಾಟ ಮಾಡಿದರು. ಈ ಪ್ರಾಂತ್ಯಗಳ ರಚನೆಯು ಪ್ರಾದೇಶಿಕತೆಗೆ ಕಾರಣವಾಗುತ್ತದೆಯಲ್ಲದೆ ಜನತೆಯ ಸಂಕುಚಿತ ಮನೋಭಾವದ ಫಲವಾಗಿ ಸೃಷ್ಟಿಗೊಂಡಿದೆ.

ನಮ್ಮ, ರಾಜ್ಯ, ಭಾಷೆ ಶ್ರೇಷ್ಠ. ಇದು ಪ್ರಾದೇಶಿಕ ಭಾಷೆಯಾದರೆ ಜನಸಾಮಾನ್ಯರಲ್ಲಿ ಇದರ ಪ್ರಾಮುಖ್ಯತೆ ಹೆಚ್ಚು ಉಳಿದ ಭಾಷೆಗಳು ಕೀಳಾದವುಗಳು ಎಂಬ ಮನೋಭಾವನೆಯಿಂದ ಇಂದು ಪ್ರಾದೇಶಿಕ ಭಾಷೆಯಾಗಿ ಹೇರಲು ಪ್ರಯತ್ನಿಸುತ್ತಿದ್ದೇವೆ.

ಭಾಷಾ ಅಲ್ಪಸಂಖ್ಯಾತರು ತಮ್ಮ ಭಾಷೆ, ರಾಜ್ಯದ ಹೊರಗಿನವರಲ್ಲಿ ಮಹತ್ವದ ಸ್ಥಾನ ಪಡೆಯುವುದಕ್ಕಾಗಿ ಏನು ಮಾಡಲು ಸಿದ್ಧರಿದ್ದಾರೆ. ಇದರಿಂದ ಭಾಷಾ ಬಹುಸಂಖ್ಯಾತರು ಅಸಮಾಧಾನಗೊಂಡು ರೊಚ್ಚಿಗೆದ್ದಿದ್ದಾರೆ.

ಆರ್ಥಿಕ ಅಂಶಗಳು –

ಭಾರತವು ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿದ್ದರೂ ಅವು ಎಲ್ಲ ಕಡೆಗೂ ಸಮಾನವಾಗಿ ಹಂಚಿಕೆಯಾಗಿಲ್ಲ. ಒಡಿಶಾ ಶ್ರೀಮಂತ ಖನಿಜ ಭಂಡಾರದೆ. ಆದ್ದರಿಂದ ಇಂದು ನಕ್ಸಲ್ ಸಮಸ್ಯೆ ಸರ್ವವ್ಯಾಪಿಯಾಗ ಸಮಸ್ಯೆಗಳಂತಹ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವಾತಾವರಣ ಸೃಷ್ಟಿಯಾಗುತ್ತದೆ. ಹೈದರಾಬಾದ್ ಕರ್ನಾಟಕ ಹಾಗು ತೆಲಂಗಾಣ ಪ್ರದೇಶಗಳ ಜನರು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಂದ ಪ್ರತ್ಯೇಕತೆಯ

ತುಂಬಾ ಹೆಚ್ಚು ಬಳಸುತ್ತಿದೆ. ಇದರ ಪ್ರಭಾವ ಆಧುನಿಕತೆಗಳು ಸಂಸ್ಕೃತಿಗೆ ಧಕ್ಕೆಯಾಗಿದೆ.

ಸಂಪರ್ಕತೆ –

ಇಂದು T.V ಟೆಲಿಫೋನ್, ಪ್ರಸ್ತುತ ಮೊಬೈಲ್ ಮುಂತಾದ ಸಂಪರ್ಕ ಮಾಧ್ಯಮಗಳು ಜನರ ಸಂಸ್ಕೃತಿ ಸಂಸ್ಕಾರವನ್ನು ಮರೆಸುವ ಜೊತೆಗೆ ಆಸಕ್ತಿ ಮಾಯವನ್ನು ಪ್ರಚೋದಿಸಿ ಅಪಸಂಸ್ಕೃತಿಗೆ ಕಾರಣವಾಗಿದೆ.

ಟೆಲಿಫೋನ್ ಮತ್ತಿತರ ಮಾಧ್ಯಮಗಳಿಗೆ ಬಿತ್ತರಿಸುವ ಚಿತ್ರಗಳನ್ನು ಪ್ರಸಾರಿಸುತ್ತಿವೆ. ಇದಲ್ಲದೆ ಸಂಸ್ಕೃತಿಗೆ ಧಕ್ಕೆಯಾಗಿದೆ. ಕೆಲವು ಸಲ ಅಶ್ಲೀಲ ದೃಶ್ಯವನ್ನು ಪ್ರಸಾರಿಸುತ್ತಾರೆ. ಅಲ್ಲದೆ, ದೇಶಗಳಿಗೆ ಸಂಬಂಧಿಸಿದ ಮಾಹಿತಿಗಳು ಬೇರೆ ದೇಶಗಳಲ್ಲಿ ಪ್ರಸಾರವಾಗುವುದು T.V ಮತ್ತು ಟೆಲಿಫೋನ್ ಮಾಧ್ಯಮಗಳ ಮೂಲಕ ಪ್ರಚಾರವಾಗಿದೆ. ಈ ರೀತಿಯಾಗಿ ಸಂಪರ್ಕತೆ ರಾಷ್ಟ್ರೀಯ ಜೀವನವನ್ನು ಹಾಳುಗೆಡವುತ್ತಿದೆ.

ಉಪಸಂಹಾರ –

ಜನರ ಮನಸ್ಸು ಪರಿವರ್ತನೆಯಾಗದ ಹೊರತು ಸಂಸ್ಕೃತಿ ಸಾಧ್ಯವಿಲ್ಲ. ಭಾರತೀಯ ಶಿಕ್ಷಣವು ಇಂತಹ ಪರಿವರ್ತನೆಯ ಸಾಧನವಾಗಿರುವುದರಿಂದ ಈ ಬದಲಾವಣೆಗಳನ್ನು ತಡೆಗಟ್ಟುವ ದಿಸೆಯಲ್ಲಿ ಪ್ರಯತ್ನ ಮಾಡಬೇಕಾಗಿದೆ.

## ಉದಾರೀಕರಣ —

**ಪೀಠಿಕೆ**

1990 ರ ಹೊಸ ಆರ್ಥಿಕ ನೀತಿಯು ಘೋಷಣೆಗಳಾದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ತತ್ವಗಳನ್ನು ಇಂದು ಕೈಗಾರಿಕ ರಂಗದಲ್ಲೂ ಅಳವಡಿಸಿಕೊಳ್ಳಲಾಗುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೊಸ ಬೆಳವಣಿಗೆಯು ಜಗತ್ತನ್ನು ಕಿರಿದಾಗಿಸಿದೆ.

ಭಾರತವು ಪ್ರಪ್ರಥಮವಾಗಿ 1975 ರಲ್ಲಿ ಉದಾರೀಕರಣ ಕ್ರಮಗಳನ್ನು ಪ್ರಾರಂಭಿಸಿತು. ಉದಾರೀಕರಣ ಹೊಸ ಆರ್ಥಿಕ ನೀತಿಯು ಇಂದಿನ ಅಭಿವೃದ್ಧಿ ರಾಷ್ಟ್ರಗಳು ಬೆಳೆಸುವ ದಾರಿ ಮಂತ್ರವಾಗಿದೆ. ಭಾರತವು ಸಹ ಈ ಶತಮಾನದ ಕೊನೆಯಾಗಿ ಉದಾರೀಕರಣದ ಮೂಲಕ ತನ್ನ ಆರ್ಥಿಕ ವ್ಯವಸ್ಥೆಯನ್ನು ಕ್ರಮಾತ್ಮಕ, ಅಲ್ಲದೇ ದೀರ್ಘಕಾಲೀನ ಉದಾರೀಕರಣದ ಮಾರ್ಗದಲ್ಲಿ ಸಾಗಲು ಪ್ರಯತ್ನಿಸುತ್ತಿದೆ.

**ವ್ಯಾಖ್ಯೆಗಳು —**

'ಉದಾರೀಕರಣ' ಎಂದರೆ ಮುಕ್ತತೆ, ಸಡಿಲತೆ ಎಂದರ್ಥವಾಗುತ್ತದೆ.

'ಉದಾರೀಕರಣ' ಎಂದರೆ ಕೈಗಾರಿಕ ನಿರ್ಬಂಧಗಳನ್ನು ಸಡಿಲಿಸಿ ಉದಾರ ಮನೋಭಾವ ತಾಳುವುದಕ್ಕೆ ಕೈಗಾರಿಕ ಉದಾರೀಕರಣ ಎನ್ನುವರು.

## ಲಕ್ಷಣಗಳು –

* ಅಧ್ಯಯನಗಳ ಮೇಲಿನ ಸಂಬಂಧಗಳನ್ನು ತಿಳಿದುಕೊಳ್ಳಲಾಗಿದೆ.

* ಪ್ರಶ್ನೆ ಸಹಾಯದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

* ಮಾನವ ರೋಗಗಳಿಗೆ ಮತ್ತು ಚಿಕಿತ್ಸಾ ನೀಡಲಾಗಿದೆ.

* ನೇರ ಚಿಕಿತ್ಸೆ ಉಪಕರಣಗಳ ಪದ್ಧತಿಗೆ ಮಾಹಿತಿ ನೀಡಲಾಗಿದೆ.

* ಚಿಕಿತ್ಸೆ ತಂತ್ರಜ್ಞಾನ ಮತ್ತು ಉಪಕರಣ-ಗಳ ಮಾಹಿತಿ ನೀಡಲಾಗಿದೆ.

Seen

B.L.D.E. Association's

# S. B. Arts & K.C.P. Science College,
# VIJAYAPUR- 586 103.

# ASSIGNMENT

For B.A./ B.Sc. ...I S t........ Semester

20 22 - 20 23

Name of the Student Ravi .S. Rathod

Roll No. 53 R.C.U. Seat No. U15KM22A0057

Subject Education - DSC-01

| Assignment No. | Date | Marks Assigned | Marks Obtained | Name and Signature of Teacher | Remarks |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| | | | | | |
| | | | | | |
| | | | | | |

1 ವೇದ ಕಾಲದ ಶಿಕ್ಷಣ ಪದ್ಧತಿಯ
1 - ಭೋದನಾ ಪದ್ಧತಿ ವಿಧಾನ
2 - ಪಠ್ಯಕ್ರಮ
3 - ಶಿಕ್ಷಣದ ಗುರಿಗಳು
4 - ಗುರು ಶಿಷ್ಯರ ನಡುವಿನ ಸಂಬಂಧ, ಗುಣಗಳನ್ನು ವಿವರಿಸಿ.

* ವೇದ ಕಾಲದ ಶಿಕ್ಷಣ ಪದ್ಧತಿ

ಪೀಠಿಕೆ :-

'ವೇದ' 'ಎಂದರೆ' 'ಅರಿ' ಅಥವಾ ತಿಳಿದುಕೊಳ್ಳುವುದು ಎಂದರ್ಥ. ಋಗ್ವೇದ, ಸಾಮವೇದ ಯಜುರ್ವೇದ ಮತ್ತು ಅಥರ್ವಣವೇದ ಎಂಬ ನಾಲ್ಕು ವೇದಗಳ್ಳಲ್ಲಿಯೂ ಜ್ಞಾನ ಪ್ರಸಾರವಾಗುತ್ತಿತ್ತು. ಅತ್ರಿ, ಜಮದಗ್ನಿ, ಭಾರದ್ವಾಜ, ವಶಿಷ್ಠ, ವಿಶ್ವಾಮಿತ್ರ, ಗೌತಮ, ಅಗಸ್ತ್ಯ, ಕಶ್ಯಪ ಮುಂತಾದ ಋಷಿಮುನಿಗಳ ಶ್ಲೋಕಗಳು ಶಿಕ್ಷಣದ ಅಧ್ಯಯನದಲ್ಲಿ ಸೇರಿದ್ದವು.

ವೇದಕಾಲೀನ ಶಿಕ್ಷಣ ಪ್ರಾಚೀನತೆ

ಭಾರತೀಯರ ಜೀವನವನ್ನು ನೋಡುವ ದೃಷ್ಟಿ ಹಾಗೂ ಅವರ ಜೀವನ ಮೌಲ್ಯಗಳು ಪರಿಣಾಮವಾಗಿತ್ತು. ಜ್ಞಾನದ ವಿಷಯವು ಅವರ ಕಲ್ಪನೆಯನ್ನು ಅವಲಂಬಿಸಿತ್ತು. ಸರ್ವಶಕ್ತನಾದ ಪರಮಾತ್ಮನ ಅಸ್ತಿತ್ವದಲ್ಲಿ ಅವರು ಅಚಲ ವಿಶ್ವಾಸವಿಟ್ಟಿದ್ದರು. ಪುನರ್ಜನ್ಮದಲ್ಲಿ ಮತ್ತು ಕರ್ಮಸಿದ್ಧಾಂತದಲ್ಲಿ ನಂಬಿಕೆ ಇಟ್ಟು ಎಲ್ಲವೂ ಅದರಂತೆ ನಡೆಯುವುದೆಂದು ನಂಬಿದ್ದರು. ಸಂಸಾರ ಸುಖ ಕ್ಷಣಿಕವೆಂದು ತಿಳಿದು, ಶಾಶ್ವತ ಸುಖವಾದ ಮೋಕ್ಷವನ್ನು ಪಡೆಯಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದ್ದರು. ಜೀವನದ ಧ್ಯೇಯವೆಂದರೆ ಸತ್ಯವನ್ನು ಅರಿಯುವುದು. ಆದ್ದರಿಂದ ಶಿಕ್ಷಣದ ಗುರಿಯು ಆಧ್ಯಾತ್ಮಿಕ ಜ್ಞಾನದ ಪಡೆಯ ಮಾಡಿಕೊಳ್ಳು ಮುಕ್ತಿಯನ್ನು ಪಡೆಯಲು ಸಹಾಯ ಮಾಡುವಂಥದಾಗಿತು.

1) * ಭೋಧನಾ ಪದ್ಧತಿ ವಿಧಾನ

* ಮೌಖಿಕ ವಿಧಾನ :-

ತರಗತಿಯಲ್ಲಿ ಕಲಿತುದನ್ನು ವಿದ್ಯಾರ್ಥಿಗಳು ಬಿಡುವಿನ ವೇಳೆಯಲ್ಲಿ ಮನನ ಮಾಡಿಕೊಳ್ಳುವಂತೆ ಹೆಚ್ಚು ಸ್ವ ಅಧ್ಯಯನಕ್ಕೆ ಗಮನ ನೀಡಲಾಗಿತ್ತು. ಚರ್ಚಾಗೋಷ್ಠಿ, ವಿಚಾರಗೋಷ್ಠಿ ಮತ್ತು ವಾದ ಸಮಾರಂಭಗಳ ಮೂಲಕ ಶಿಕ್ಷಣ ನೀಡಲಾಗುತ್ತಿತ್ತು. ಉದಾಹರಣೆ ಮತ್ತು ನೀತಿ ಕಥೆಗಳು ಮುಖಾಂತರ ಅತಿ ಜಟಿಲವಾದ ನೈತಿಕ ಸತ್ಯವನ್ನು ಸುಲಭವಾಗಿ ತಿಳಿಯುವಂತೆ ಹೇಳಿ ಕೊಡಲಾಗುತ್ತಿತ್ತು. ಬರವಣಿಗೆಯು ಕಲೆ ಪೂರ್ಣ ಅಭಿವೃದ್ಧಿ ಹೊಂದಿರಲಿಲ್ಲವಾದ್ದರಿಂದ ಮೌಖಿಕ ಅಥವಾ ಶಾಬ್ದಿಕ ರೂಪದಲ್ಲಿಯೇ ಶಿಕ್ಷಣ ನೀಡಲಾಗುತ್ತಿತ್ತು.

* ವಿಷಯಗಳನ್ನು ಪದ್ಯ ರೂಪದಲ್ಲಿ ಬರೆದು ಕಲಿಸಲಾಗುತ್ತಿತ್ತು :-

ಕಠಿಣ ಮತ್ತು ಅಸ್ಪಷ್ಟ ರಸ್ಯವಿರದ ನೀರಸ ವಿಷಯಗಳನ್ನು ಸಹ ಪದ್ಯರೂಪದಲ್ಲಿ ಕಂಠಪಾಠಕ್ಕೆ ಅನುಕೂಲವಾಗುವಂತೆ ಬರೆದು ಕಲಿಸಲಾಗುತ್ತಿತ್ತು.

* ವೈಯಕ್ತಿಕ ಪದ್ಧತಿ :-

ಸುಸಂಘಟಿತ ಶೈಕ್ಷಣಿಕ ಸಂಸ್ಥೆಗಳು ಇರದೇ ಇರುವ ಕಾರಣದಿಂದ ಗುರುಕುಲಗಳಲ್ಲಿ ಒಬ್ಬನೇ ಶಿಕ್ಷಕ ವಿವಿಧ ವಿಷಯಗಳನ್ನು ಭೋಧಿಸುವ ಪದ್ಧತಿ ಜಾರಿಯಲ್ಲಿತ್ತು. ವಿದ್ಯಾರ್ಥಿಗಳಿಗೆ ದಿನವೂ ಹಿಂದಿನ ಪಾಠವನ್ನು ಕುರಿತು ಪ್ರಶ್ನೆಗಳನ್ನು ಕೇಳುತ್ತಿದ್ದುದರಿಂದ ಗೃಹಪಾಠ ಹಾಗೂ ಸ್ವ ಅಧ್ಯಯನಕ್ಕೆ ಮತ್ತು ಸತತ ಅಧ್ಯಯನಕ್ಕೆ ಗಮನ ನೀಡಲಾಗುತ್ತಿತ್ತು.

* ಶ್ರವಣ :-
ವಿದ್ಯಾರ್ಥಿಯು ತಾನು ಕಲಿತಿದ್ದ ಭಾಗವನ್ನು ಅರ್ಥಮಾಡಿಕೊಳ್ಳಲು. ಬುದ್ಧಿಶಕ್ತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಶ್ರಮಿಸುತ್ತಿದ್ದ.

* ಧ್ಯಾನ :- ಮನನ
ಮನನದಿಂದ ತಪಸ್ಸಿನಿಂದ ಪಡೆದ ಜ್ಞಾನವನ್ನು ಆತ್ಮ ಸಾಕ್ಷಾತ್ಕಾರಕ್ಕೆ ಅನ್ವಯಿಸುವ ವಿಧಾನ ಅನುಸರಿಸುತ್ತಿದ್ದು (ಶ್ರವಣ, ಮನನ, ನಿಧಿ ಧ್ಯಾಸನ) ವೇದ ಮಂತ್ರಗಳು ಅದ್ಭುತ ಶಕ್ತಿಯಿಂದ ಕೂಡಿದ್ದು ನಿಯಮಕ್ಕೆ ಅನುಸಾರವಾಗಿ ಹೇಳದ ಮಂತ್ರಗಳು ತಮ್ಮದೇ ಆದ ವಿಶೇಷ ಗುಣಗಳನ್ನು ಹೊಂದಿದ್ದರಿಂದ ವೇದ ಹೇಳುವ ಕ್ರಿಯ ಒಂದು ಕಲೆಯಾದುದರಿಂದ ಸ್ಪಷ್ಟ ಉಚ್ಚಾರಣೆಗೆ ಹೊಂದಿದ್ದರಿಂದ ವೇದ ಹೇಳುವ ಕ್ರಿಯ ಒಂದು ಕಲೆಯಾದುದರಿಂದ ಗ್ರಹಿಕೆಗೆ ಪ್ರಾಶಸ್ತ್ಯವಿತ್ತು.

2. * ಪಠ್ಯಕ್ರಮ :-
ವೇದ, ಉಪನಿಷತ್ತುಗಳು, ಪುರಾಣಗಳು ಸಂಸ್ಕೃತ, ತರ್ಕಶಾಸ್ತ್ರ, ಜ್ಯೋತಿಷ್ಯ, ನೀತಿಶಾಸ್ತ್ರ, ವ್ಯಾಕರಣ ಮತ್ತು ಸಾಹಿತ್ಯ ಮತ್ತು ಆಯಾಯ ವರ್ಣಗಳ ವೃತ್ತಿ-ಕಸುಬುಗಳಿಗೂ ಅವಕಾಶ. ನೀಡಲಾಗಿತ್ತು. ವಿಚಾರಗೋಷ್ಠಿಗಳನ್ನು ವ್ಯವಸ್ಥೆ ಮಾಡಿ ಚರ್ಚಿಸಲು ಅವಕಾಶವಿತ್ತು.

3. * ಶಿಕ್ಷಣದ ಗುರಿಗಳು :
ವಿದ್ಯಾರ್ಥಿಗಳು ಅಥವಾ ಶಿಕ್ಷಕರ ಆತ್ಮ ಸಾಕ್ಷಾತ್ಕಾರಕ್ಕೆ ಮತ್ತು ಜೀವನದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳ ಸಾಧನೆಯು ತಕ್ಕ ಶಿಕ್ಷಣ ಸಹಕರಿಸುತ್ತಿತ್ತು.

ಆಚಾರವಿಚಾರ ಧರ್ಮ ಮತ್ತು ಗುಣಗಳಿಗೆ ಪ್ರಮುಖವಾಗಿ ಮೋಕ್ಷ ಸಾಧನೆಯ ತತ್ವಗಳು ಗಣನೀಯವಾಗಿದ್ದವು. ಪ್ರಾಣಿ-ಪಕ್ಷಿ ಇತರ ಜೀವರಲ್ಲಿ ಸಹಕಾರ, ಸಹಬಾಳ್ವೆ, ಹೊಂದಾಣಿಕೆ, ಕರುಣೆ, ಸಹಕಾರದಿಂದ ಬಾಳುವ, ಸ್ವಾವಲಂಬನೆ, ನ್ಯಾಯ ತತ್ವನೀತಿಗಳೆಂಬುದು ಶಿಕ್ಷಣದ ಗುರಿಗಳಾಗಿದ್ದವು. ಧರ್ಮವೇ ಶಿಕ್ಷಣವಾಗಿದ್ದು, ಧರ್ಮವನ್ನು ಅಭ್ಯಾಸ ಮಾಡುವುದು ಶಿಕ್ಷಣದ ಪ್ರಮುಖ ಗುರಿಯಾಗಿತ್ತು. ಪ್ರಾಚೀನ ಭಾರತದ ಜನಜೀವನದ ಮೇಲೆ ರಾಜಕೀಯ, ಸಾಮಾಜಿಕ ಕ್ಷೇತ್ರಗಳ ಪ್ರಭಾವಕ್ಕಿಂತ ಧಾರ್ಮಿಕ ಕ್ಷೇತ್ರದ ಪ್ರಭಾವ ಬಹಳವಿದೆ. ಭಾರತವು ಇಂತಹ ಧರ್ಮದ ತಳಹದಿಯ ಮೇಲೆಯೇ ನಡೆದು ಬಂದಿದೆ. ಇಲ್ಲಿ ಜ್ಞಾನಾರ್ಜನೆಗಿಂತ ಹೆಚ್ಚಾಗಿ ಜೀವನದಲ್ಲಿ ಮುಕ್ತಿ ಹಾಗೂ ಮೋಕ್ಷ ಸಾಧನೆಗಾಗಿ ಶಿಕ್ಷಣವಿತ್ತು ಇದೇ ಜೀವನದ ಅಂತಿಮ ಹಾಗೂ ಉನ್ನತ ಗುರಿಯಾಗಿತ್ತು. ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಮೋಕ್ಷವೆಂದು ಇಲ್ಲಿ ಕರೆದಿದ್ದಾರೆ. ತನ್ನನ್ನು ತಾನು ಅರ್ಥ ಮಾಡಿಕೊಳ್ಳುವುದರ ಮೂಲಕ ಹಿಂದೆ ಮುಕ್ತಿ ಪಡೆಯುತ್ತಿದ್ದರು. ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಹಾ ಬೋಧಿಸುತ್ತಿದ್ದರು. ಶಿಕ್ಷಣದ ಉನ್ನತ ಮತ್ತು ಅಂತಿಮ ಗುರಿಯೆಂದರೆ ಬ್ರಹ್ಮತ್ವವನ್ನು ಪಡೆಯುವುದಾಗಿತ್ತು. ಬ್ರಹ್ಮತ್ವವೆಂದರೆ ರಾಗ, ರಾಗ ವಿಷಯ ನಂತರದ ಜ್ಞಾನ; ಅಧಿಕಾರ ಮತ್ತು ಪ್ರಕೃತಿಯ ನಿಯಂತ್ರಣ. ಅಂದರೆ ಬ್ರಹ್ಮನಾಗುವುದು ಇಲ್ಲವೇ ಬ್ರಹ್ಮನ ಸ್ಥಾನಕ್ಕೆ ಏರುವುದು ಎಂದಾಗಿದೆ. ಬ್ರಹ್ಮ ಪದವಿಯನ್ನು ಪಡೆಯಲು ಇಲ್ಲಿ ಆರಾಧನೆಯಿಂದ ಸಂತತ ಇಂದ್ರಿಯಗಳನ್ನು ಶುದ್ಧಗೊಳಿಸಿಕೊಂಡು ತಪೋಸಾಧನೆ ಮಾಡುವುದಾಗಿತ್ತು.

* ಗುರು ಶಿಷ್ಯರ ನಡುವಿನ ಸಂಬಂಧ

ಬ್ರಾಹ್ಮಣ (ವೇದ) ಕಾಲದಲ್ಲಿ ಗುರು ಶಿಷ್ಯರ ಸಂಬಂಧ ತಂದೆ ಮಗನಷ್ಟೆ ಪವಿತ್ರ ಹಾಗೂ ಪ್ರೀತಿ ವಿಶ್ವಾಸದಿಂದ ಕೂಡಿತ್ತು. ಶಿಷ್ಯನಿಗೆ ಯಾವುದಕ್ಕೂ ಕೊರತೆಯಾಗದಂತೆ ಅತೃಪ್ತಿಯಾಗದಂತೆ ಗುರುಗಳು ಮನಸಿಚ್ಛೆ-ಯಂತೆ ಅವರಿಗೆ ತೃಪ್ತಿ ಬರುವಂತೆ ಶಿಷ್ಯರು ಜೀವನ ನಡೆಸುತ್ತಿದ್ದನು. ಹಲವು ಶಿಷ್ಯರು ಗುರುಗಳಿಗೆ ಆಶ್ರಯವಾಗಿ ಶಿಕ್ಷಣದ ನಂತರವು ಗುರುಗಳೊಂದಿಗೆ ವಾಸಿಸಿದ ಉದಾಹರಣೆಗಳುಂಟು. ಗುರು ಕೇವಲ ಪಾಠ ಪ್ರವಚನಗಳಿಗೆ ಅಲ್ಲದೆ ಶಿಷ್ಯನ ಆಹಾರ ಬಟ್ಟೆ ವಸತಿಗಳ ವ್ಯವಸ್ಥೆ ಮಾಡುತ್ತಿದ್ದನು. ಅವನ ನಡೆನುಡಿಗಳ ಉಸ್ತುವಾರಿ ಮಾಡುತ್ತಿದ್ದನು. ಎಲ್ಲಾ ವಿಷಯಗಳಲ್ಲಿಯೂ ಅವನಿಗೆ ಶಿಕ್ಷಣ ಕೊಡುತ್ತಿದ್ದರು. ವಿದ್ಯಾರ್ಥಿಯ ಗುಣದೋಷಗಳಿಗೆ ಗುರುವೇ ಜವಾಬ್ದಾರನು ಎಂದು ತಿಳಿಯಲಾಗುತ್ತಿತ್ತು. ಗುರುವು ಎಂದು ಕ್ರೂರವಾಗಿ ಶಿಕ್ಷಿಸುತ್ತಿದಿಲ್ಲ. ಕೆಲವೊಂದು ಸನ್ನಿವೇಶಗಳಲ್ಲಿ ಮಾತ್ರ ಗುರುವು ಬೆತ್ತವನ್ನು ಉಪಯೋಗಿಸುತ್ತಿದ-ನು. ಇಲ್ಲಿ ಶಿಷ್ಯನು ಗುರುವನ್ನು ಎಂದು ವಿರೋಧಿಸುತ್ತಿದ್ದಿಲ್ಲ. ಶಿಷ್ಯನು ಆಕಸ್ಮಾತ್ ಅನಾರೋಗ್ಯದಿಂದ ಬಳಲುತ್ತಿದ್ದರೆ ಅವನನ್ನು ಗುರುವು ಉಪಚಾರ ಮಾಡುತ್ತಿದ್ದನು. ಹೀಗೆ ಈ ಕಾಲದಲ್ಲಿ ಗುರು- ಶಿಷ್ಯರ ಸಂಬಂಧ ಎಲ್ಲ ದೃಷ್ಟಿಯಿಂದಲೂ ಆದರ್ಶಮಯವಾಗಿತ್ತು.

# * ಶಿಕ್ಷಣದ ಗುಣಗಳು

* ಬ್ರಾಹ್ಮಣ ಪದ್ಧತಿಯ ಶಿಕ್ಷಣವು ವಿದ್ಯಾರ್ಥಿಗಳ ಸರ್ವತೋ-ಮುಖ ಬೆಳವಣಿಗೆಯನ್ನು ಸಾಧಿಸುವಲ್ಲಿ ಸಂಪೂರ್ಣ ಯಶಸ್ಸಿಯನ್ನು ಹೊಂದಿತ್ತು.

* ಗುರುಗಳು ವಿದ್ಯಾರ್ಥಿಗಳ ಚಾರಿತ್ರ್ಯ ರೂಪಿಸುವುದಕ್ಕೆ ಮಹತ್ವ ಕೊಟ್ಟಿದರು. ವಿದ್ಯಾರ್ಥಿಗಳು ಗುರುಕುಲಗಳ ಶಾಂತ ಹಾಗೂ ಸುಂದರ ವಾತಾವರಣದಲ್ಲಿ ವಾಸಿಸುತ್ತಾ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ನೈತಿಕ ಬೆಳವಣಿಗೆಯನ್ನು ಹೊಂದುತ್ತಿದ್ದರು. ವಿದ್ಯಾರ್ಥಿಗಳು ಬಾಹ್ಯ ಶಿಸ್ತಿನ ಬದಲಾಗಿ ಆಂತರಿಕ ಶಿಸ್ತಿನಿಂದ ವರ್ತಿಸುತ್ತಿದ್ದರು.

* ಪ್ರಾಯೋಗಿಕ, ಬೌದ್ಧಿಕ ಮತ್ತು ನೈತಿಕ ಶಿಕ್ಷಣದ ಜೊತೆಗೆ ಶಿಸ್ತು ಸಂಯಮವನ್ನು ಕಲಿಸಿಕೊಡಲಾಗುತ್ತಿತ್ತು. ವಿದ್ಯಾರ್ಥಿಗಳು ಬೆಳಗ್ಗೆ ಬೇಗನೆ ಏಳುವುದು, ರಾತ್ರಿ ಬೇಗನೆ ಮಲಗುವುದು; ವಿದ್ಯಾಭ್ಯಾಸ ಮುಗಿಯು-ವವರೆಗೆ ಬ್ರಹ್ಮಚರ್ಯ ಪಾಲಿಸುವುದು, ಸರಳ ಜೀವನ ಮತ್ತು ಉದಾತ್ತ ವಿಚಾರಗಳನ್ನು ಹೊಂದಿರುವುದು ಮುಂತಾದವುಗಳನ್ನು ಪಾಲಿಸು-ವಂತೆ ನೋಡಿಕೊಳ್ಳಲಾಗುತ್ತಿತ್ತು. ಇಂತಹ ವಾತಾವರಣದಲ್ಲಿ ಅಮೂಲ್ಯವಾದ ಗ್ರಂಥ ರಚನಾ ಕಾರ್ಯವು ಕೂಡ ನಡೆಯುತ್ತಿತ್ತು.

* (ಶಿಕ್ಷಕರು) ಶಿಕ್ಷಕರೆ ಆದ್ದರಿಂದ ಸಂಪೂರ್ಣ ಸ್ವಾತಂ-ತ್ರರು. ಅರಸರು, ಶ್ರೀಮಂ-ತರು ಅಥವಾ ಇತರ ಯಾವುದೇ ಅಧಿಕಾರಿಗಳು ಗುರುಕುಲದ ಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಗುರುವಿನಲ್ಲಿ ಯಾವುದೇ ಸ್ವಾರ್ಥ ಭಾವನೆ ಇಲ್ಲದಿರಿಂದ ಗುರು-ಶಿಷ್ಯರ ನಡುವೆ ಪ್ರೀತಿ ಮತ್ತು ಸೌಹಾರ್ದತೆಯ ಭಾವನೆ ಇಲ್ಲದ್ದರಿಂದ ಈ ಇತ್ತು ಇವರ ಪರಿಣಾಮವಾಗಿ ಬರವಣಿಗೆ-ಯ ರೀತಿ ಅಥವಾ ಮುದ್ರಣ ರೀತಿ ಅಭಿವೃದ್ಧಿ ಹೊಂದಿದೆ.

ಶಿಕ್ಷಣವು ಧಾರ್ಮಿಕ ವಿಷಯಗಳಿಗೆ ಒತ್ತಿನ ಮಹತ್ವ ನೀಡಿದ್ದರೂ ಸಮಾಜದ ಪ್ರಗತಿಯನ್ನು ನಿರ್ಲಕ್ಷಿಸಿರಲಿಲ್ಲ ಸಮಾಜದ ಪ್ರಗತಿಯನ್ನು ಸಾಧಿಸುವುದು ಮತ್ತು ನಾಗರಿಕರ ಕರ್ತವ್ಯಗಳನ್ನು ಭೋಧಿಸುವುದು ಶಿಕ್ಷಣದ ಪ್ರಮುಖ ಉದ್ದೇಶವಾಗಿತ್ತು.

ಗುರು ಉನ್ನತವಾದ, ಶ್ರೇಷ್ಠವಾದ ನೈತಿಕ ಮತ್ತು ಆಧ್ಯಾತ್ಮಿಕ ಅರ್ಹತೆಗಳನ್ನು ಹೊಂದಿರುತ್ತಿದ್ದನು. ಏಕೆಂದರೆ ಸತ್ಯವು ಸಾಧಾರಣದ ವಿಷಯವು ವ್ಯಕ್ತಿಯಿಂದ ಭೋಧಿಸಲ್ಪಟ್ಟಾಗ ಸರಿಯಾಗಿ ಗ್ರಹಿಸಲ್ಪಡುವುದಿಲ್ಲ. ಏಕೆಂದರೆ ಅದು ಕುರುಡನಿಗೆ ಕುರುಡನು ದಾರಿ ತೋರಿಸಿದಂತಾಗುತ್ತದೆ. ಗುರು ಸತ್ಯವನ್ನು ತನಗೆ ತಿಳಿದಿರುವಂತೆಯೇ ಮನಃಪೂರ್ವಕ ಕಲಿಸಿ ಭೋಧಿಸುತ್ತಿದ್ದನು.

ಗುರು ಶಿಷ್ಯರ ನಡುವಿನ ಸಂಬಂಧ ವ್ಯಕ್ತಿಗತವಾಗಿತ್ತು. ಶಿಷ್ಯನು ಗುರುವನ್ನು ತನ್ನ ಪಿತೃಸಮಾನನಂತೆ ಕಾಣುತ್ತಿದ್ದನು. ಗುರು ಮತ್ತು ಶಿಷ್ಯ ಇಬ್ಬರೂ ಸಮಾನ ಆಸಕ್ತಿಗಳುಳ್ಳವರು ಜ್ಞಾನವನ್ನು ಸಂಪಾದಿಸಿಕೊಂಡು ಬರುವುದು, ಅದನ್ನು ಭೋಧಿಸುವುದು ಮತ್ತು ತನ್ನ ನಡವಳಿಕೆಯಿಂದ ಜ್ಞಾನದ ಪ್ರಾಮುಖ್ಯತೆಯನ್ನು ತಿಳಿಯಪಡಿಸುವುದು ಗುರುಗಳ ಕರ್ತವ್ಯವಾಗಿತ್ತು.

ಗುರು ಒಂದು ವೇಳೆ ಯಾವುದಾದರೊಂದು ವಿದ್ಯೆಯನ್ನು ಕಲಿಸಲು ತಾನು ಅಸಮರ್ಥನೆಂದು ಕಂಡರೆ ಬೇರೆ ಸಮರ್ಥ ಗುರುವಿನ ಬಳಿ ತನ್ನ ವಿದ್ಯಾರ್ಥಿಗಳನ್ನು ಕಲಿಯಲು ಕಳಿಸಿಕೊಡುವುದು ತನ್ನ ಕರ್ತವ್ಯವೆಂದು ತಿಳಿದಿದ್ದನು.

ಲಭ್ಯವಿರುವ ಆಧಾರಗಳ ಮೇಲಿಂದ ಬ್ರಾಹ್ಮಣ ಶಿಕ್ಷಣ ಪದ್ಧತಿಯಲ್ಲಿ ಸ್ತ್ರೀ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರೆಂದು ಹೇಳಬಹುದು. ಇವರ ಕಾಲದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಚರ್ಚೆಗಳಲ್ಲಿ ಸ್ತ್ರೀಯರೂ ಭಾಗವಹಿಸುತ್ತಿದ್ದರು. ಅನೇಕ ಸ್ತ್ರೀಯರಿಗೆ ವೇದಾಂತದ ಗಂಭೀರವಾದ ಚರ್ಚೆಯಲ್ಲಿ ಭಾಗವಹಿಸಲು ಅವಕಾಶವಿತ್ತು.

ಈ ಕಾಲದಲ್ಲಿ ಸಂಸ್ಕೃತವು ಜನರ ಧಾರ್ಮಿಕ ವಿಧಿಗಳ ಭಾಷೆ, ಶಿಕ್ಷಣದ ಭಾಷೆ ಹಾಗೂ ವಿಜ್ಞಾನದ ಭಾಷೆಯಾಗಿತ್ತು. ಎರಡು ರೀತಿಯ ಭಾಷೆಗಳು ಬಳಕೆಯಲ್ಲಿದ್ದವು. ದೇವ ಭಾಷೆ ಹಾಗೂ ಮಾನವ ಭಾಷೆ. ಧಾರ್ಮಿಕ ಕಾರ್ಯಗಳಲ್ಲಿ ದೇವಭಾಷೆಯನ್ನು, ಸಾಮಾನ್ಯ ಸಂಭಾಷಣೆಗಳಿಗಾಗಿ ಮಾನವ ಭಾಷೆಯನ್ನು ಉಪಯೋಗಿಸಲಾಗುತ್ತಿತ್ತು.

ಇಂತಹ ವರ್ಣಕ್ಕೆ (ಜಾತಿಗೆ) ನಿಗದಿಪಡಿಸಲ್ಪಟ್ಟ ಉದ್ಯೋಗ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ಶಿಕ್ಷಣ ದೊರೆಯುತ್ತಿತ್ತು. ವೈಶ್ಯರು ವಾಣಿಜ್ಯದಲ್ಲಿ ಹೆಚ್ಚಿನ ಕೆಲಸ ಮಾಡಿ ಉದಾಹರಣೆಗಳು ಕಂಡು ಬರದಿದ್ದರೂ ಸಮಾಜದ ಆರ್ಥಿಕ ರಂಗದಲ್ಲಿ ಅವರು ವಹಿಸಿದ ಮಹತ್ವ ಪೂರ್ಣ ಪಾತ್ರದಿಂದ ಕಂಡು ಬರುವುದೇನೆಂದರೆ ಅವರು ಇತರರಿಗೆ ತಮ್ಮ ಕೆಲಸಗಳಾದ ಒಕ್ಕಲುತನ, ವ್ಯಾಪಾರ ಮುಂತಾದವುಗಳಲ್ಲಿ ತರಬೇತಿ ನೀಡಿದರು.

ಉಪಸಂಹಾರ :

ಒಟ್ಟಾರೆಯಾಗಿ ಹೇಳುವುದಾದಲ್ಲಿ ಈ ಬ್ರಾಹ್ಮಣರ ಕಾಲದ ಶಿಕ್ಷಣ ಉತ್ತಮ ಮಟ್ಟದ ಶಿಕ್ಷಣ ಪದ್ಧತಿಯಾಗಿತ್ತೆಂದು ಹೇಳಬಹುದು. ಶಿಕ್ಷಣದ ವಿಧಾನ ಪೂರ್ವಭಾವಿಯಾಗಿ ಯೋಜನೆ ಆಧರಿಗೊಳ್ಳಿಸಿತ್ತು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿತ್ತು. ಅವರ ಭವಿಷ್ಯವನ್ನು ರೂಪುಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಎಂದು ಹೇಳಬಹುದು

Seen